**All India Radio: Bangalore**
**National Bulletin In Kannada**
**25.08.2026  1.10 pm**

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**25.08.2026  1.10 pm**

**<>><><*><><<>**

ಮುಖ್ಯಾಂಶಗಳು

**೧. ಹತ್ತು ವರ್ಷ ಪೂರೈಸಿದ ಏಕೀಕೃತ ಪಾವತಿ ವ್ಯವಸ್ಥೆ-ಯುಪಿಐ; ಸೇವಾ ಯಶಸ್ಸಿನ ಕುರಿತು ಪ್ರಧಾನಿ ನರೇಂದ್ರ ಮೋದಿ ಶ್ಲಾಘನೆ**

**೨. ೨೦೪೭ರ ವೇಳೆಗೆ ಭಾರತ ೩೦ ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗುವ ಗುರಿ; ಟೋಕಿಯೊದಲ್ಲಿ ಕೇಂದ್ರ ಸಚಿವ ಪಿಯೂಶ್ ಗೋಯಲ್**

**೩. ಭಾರತ-ಚೀನಾ ೨೫ನೇ ವಿಶೇಷ ಪ್ರತಿನಿಧಿಗಳ ಮಾತುಕತೆಯಲ್ಲಿಂದು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಭಾಗಿ**

**೪. ಭಾರತ-ಶ್ರೀಲಂಕಾ ಟೆಸ್ಟ್ ಕ್ರಿಕೆಟ್; ಮೂರನೇ ದಿನದಾಟದಲ್ಲಿಂದು ೩೦೦ ರನ್‌ಗೂ ಅಧಿಕ ಹಿನ್ನಡೆಯಲ್ಲಿ ಶ್ರೀಲಂಕಾ**

**<>><><*><><<>**

ಭಾರತದ ಡಿಜಿಟಲ್ ಪಾವತಿ ವ್ಯವಸ್ಥೆಯ ಬೆನ್ನೆಲುಬಾಗಿರುವ ಏಕೀಕೃತ ಪಾವತಿ ವ್ಯವಸ್ಥೆ-ಯುಪಿಐ, ಇಂದಿಗೆ ಹತ್ತು ವರ್ಷಗಳನ್ನು ಪೂರೈಸಿದೆ. ೨೦೧೬ರ ಆಗಸ್ಟ್ ೨೫ರಂದು ಸಾರ್ವಜನಿಕ ಬಳಕೆಗೆ ಆರಂಭವಾದ ಯುಪಿಐ, ವಹಿವಾಟಿನ ಪ್ರಮಾಣದಲ್ಲಿ ಸುಮಾರು ೧೩ ಸಾವಿರ ಪಟ್ಟು ಏರಿಕೆ ಕಂಡಿದೆ. ೨೦೧೬-೧೭ರಲ್ಲಿ ೧.೭೮ ಕೋಟಿ ಇದ್ದ ವಾರ್ಷಿಕ ವಹಿವಾಟುಗಳ ಸಂಖ್ಯೆ, ೨೦೨೫-೨೬ರಲ್ಲಿ ೨೪ ಸಾವಿರದ ೧೬೨ ಕೋಟಿಗೂ ಅಧಿಕವಾಗಿದೆ. ಇದೇ ಅವಧಿಯಲ್ಲಿ ವಹಿವಾಟಿನ ಮೌಲ್ಯ ೭ ಸಾವಿರ ಕೋಟಿ ರೂಪಾಯಿಗಳಿಂದ ಸುಮಾರು ೩೧೪ ಲಕ್ಷ ಕೋಟಿ ರೂಪಾಯಿಗಳಿಗೆ ಏರಿಕೆಯಾಗಿದೆ ಎಂದು ಹಣಕಾಸು ಸಚಿವಾಲಯ ತಿಳಿಸಿದೆ. ಗಡಿಯಾಚೆಗಿನ ಡಿಜಿಟಲ್ ಪಾವತಿಗೆ ಜಾಗತಿಕ ವೇದಿಕೆಯಾಗಿ ಹೊರಹೊಮ್ಮಿರುವ ಯುಪಿಐ, ಪ್ರಸ್ತುತ ೧೧ ದೇಶಗಳಲ್ಲಿ ಕಾರ್ಯನಿರ್ವಹಿಸುತ್ತಿದೆ.  ಯುಪಿಐ ಡಿಜಿಟಲ್ ಪಾವತಿ ವ್ಯವಸ್ಥೆ ೧೦ ವರ್ಷ ಪೂರೈಸಿರುವ

ಹಿನ್ನೆಲೆಯಲ್ಲಿ ಸಂದೇಶ ಹಂಚಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ಭಾರತದ ಈ ಡಿಜಿಟಲ್ ಕ್ರಾಂತಿಯ ಪ್ರಮಾಣ ಮತ್ತು ವ್ಯಾಪ್ತಿಗೆ ಪ್ರತಿಯೊಬ್ಬ ಭಾರತೀಯನೂ ಹೆಮ್ಮೆ ಪಡೆಯಬೇಕೆಂದು ತಿಳಿಸಿದ್ದಾರೆ. ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು, ಏಕೀಕೃತ ಪಾವತಿ ವ್ಯವಸ್ಥೆಯ ದಶಕಗಳ ಸೇವಾ ಯಶಸ್ಸನ್ನು ಶ್ಲಾಘಿಸಿ, ಭಾರತೀಯ ಡಿಜಿಟಲ್ ಪಾವತಿ ಪಯಣದಲ್ಲಿ ಇದೊಂದು ಪ್ರಮುಖ ತಿರುವಾಗಿದೆ ಎಂದಿದ್ದಾರೆ.

**<>><><*><><<>**

ಜಾಗತಿಕ ಸವಾಲುಗಳ ನಡುವೆ ಭಾರತ ಕಳೆದ ವರ್ಷ ಶೇಕಡ ೭.೭ರಷ್ಟು ಪ್ರಗತಿ ಸಾಧಿಸಿದ್ದು, ೨೦೪೭ರ ವೇಳೆಗೆ ೩೦ ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ಹೊರಹೊಮ್ಮುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಶ್ ಗೋಯಲ್ ತಿಳಿಸಿದ್ದಾರೆ.  ಜಪಾನ್‌ನ ಟೋಕಿಯೊದಲ್ಲಿ ಅಲ್ಲಿನ ಪ್ರಮುಖ ಹಣಕಾಸು ಮತ್ತು ಹೂಡಿಕೆ ಸಂಸ್ಥೆಗಳ ಉನ್ನತ ಅಧಿಕಾರಿಗಳೊಂದಿಗೆ ನಡೆದ ಮಾತುಕತೆ ವೇಳೆ ಅವರು, ಭಾರತೀಯ ಆರ್ಥಿಕತೆ ಸಾಮರ್ಥ್ಯ ಮತ್ತು ಬೆಳವಣಿಗೆಯನ್ನು ಪ್ರಸ್ತಾಪಿಸಿದರು.  ಸಭೆಯಲ್ಲಿ ಮಾತನಾಡಿದ ಅವರು, ಭಾರತದ ಸದೃಢ ಬ್ಯಾಂಕಿಂಗ್ ವಲಯ, ಬೆಳೆಯುತ್ತಿರುವ ಮಧ್ಯಮ ವರ್ಗ ಹಾಗೂ ಹೆಚ್ಚುತ್ತಿರುವ ತಲಾ ಆದಾಯ ದೇಶದ ಆರ್ಥಿಕ ಪ್ರಗತಿಗೆ ವೇಗ ನೀಡುತ್ತಿವೆ ಎಂದರು.  ಜಪಾನ್ ಹೂಡಿಕೆದಾರರಿಗೆ ಭಾರತದ ಸೆಮಿಕಂಡಕ್ಟರ್, ಕೃತಕ ಬುದ್ಧಿಮತ್ತೆ, ನವೀಕರಿಸಬಹುದಾದ ಇಂಧನ, ಹಸಿರು ಹೈಡ್ರೋಜನ್ ಮತ್ತು ಡಿಜಿಟಲ್ ಮೂಲಸೌಕರ್ಯ ವಲಯಗಳಲ್ಲಿ ಅಪಾರ ಅವಕಾಶಗಳಿವೆ ಎಂದು ತಿಳಿಸಿದರು.

**<>><><*><><<>**

ಎಚ್-೧ಬಿ ವೀಸಾ ಅರ್ಜಿಗಳನ್ನು ಸಲ್ಲಿಸುವ ಉದ್ಯೋಗದಾತ ಕಂಪನಿಗಳ ಮೇಲೆ ಸುಮಾರು ೧ ಲಕ್ಷ ೩ ಸಾವಿರದ ೨೬೫ ಅಮೆರಿಕಾ ಡಾಲರ್ ಹೆಚ್ಚುವರಿ ಶುಲ್ಕವನ್ನು ವಿಧಿಸಲು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತ ಪ್ರಸ್ತಾಪಿಸಿದೆ. ಇದು ಭಾರತೀಯ ಮಾಹಿತಿ ತಂತ್ರಜ್ಞಾನ ವೃತ್ತಿಪರರು ಹಾಗೂ ಕೌಶಲ್ಯಯುತ ಉದ್ಯೋಗಿಗಳನ್ನು ನೇಮಿಸಿಕೊಳ್ಳುವ ಕಂಪನಿಗಳ ಮೇಲೆ ಭಾರಿ ಆರ್ಥಿಕ ಹೊರೆಯಾಗಲಿದೆ, ಈ ಶುಲ್ಕದಿಂದ ವಾರ್ಷಿಕವಾಗಿ ಸುಮಾರು ೮.೮ ಶತಕೋಟಿ ಡಾಲರ್ ಆದಾಯ ನಿರೀಕ್ಷಿಸಲಾಗಿದ್ದು, ವಲಸೆ ಅರ್ಜಿಗಳ ಪರಿಶೀಲನೆ, ವಂಚನೆ ಪತ್ತೆ ಹಾಗೂ ರಾಷ್ಟ್ರೀಯ ಭದ್ರತಾ ಪರಿಶೀಲನೆ ಸೇರಿದಂತೆ ವಿವಿಧ ಕಾರ್ಯಗಳಿಗೆ ಬಳಸಲಾಗುವುದು ಎಂದು ಅಮೆರಿಕದ ಆಂತರಿಕ ಭದ್ರತಾ ಇಲಾಖೆ ತಿಳಿಸಿದೆ. ಆದರೆ, ಮಿತಿಗೆ ಒಳಪಡದ ಕೆಲವು ಲಾಭರಹಿತ ಹಾಗೂ ಸರ್ಕಾರಿ

ಸಂಶೋಧನಾ ಸಂಸ್ಥೆಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳು ಸಲ್ಲಿಸುವ ಎಚ್-೧ಬಿ ಅರ್ಜಿಗಳಿಗೆ ಈ ಹೆಚ್ಚುವರಿ ಶುಲ್ಕ ಅನ್ವಯಿಸುವುದಿಲ್ಲ.

<>><><*><><<>

ಭಾರತ ಮತ್ತು ಚೀನಾ ನಡುವಿನ ಗಡಿ ವಿವಾದಕ್ಕೆ ಸಂಬಂಧಿಸಿದಂತೆ, ೨೪ ನೇ ಸುತ್ತಿನ ವಿಶೇಷ ಪ್ರತಿನಿಧಿಗಳ ಮಾತುಕತೆಯಲ್ಲಿ ಪಾಲ್ಗೊಳ್ಳಲು ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್ ಬೀಜಿಂಗ್ ಭೇಟಿಯಲ್ಲಿದ್ದಾರೆ. ಅವರಿಂದು, ಚೀನಾ ಉಪಾಧ್ಯಕ್ಷ ಹಾನ್ ಝೆಂಗ್ ಅವರನ್ನು ಭೇಟಿ ಮಾಡಿದರು. ಇಂದು ನಡೆಯುತ್ತಿರುವ ೨೪ನೇ ಸುತ್ತಿನ ವಿಶೇಷ ಪ್ರತಿನಿಧಿಗಳ ಮಾತುಕತೆಗೂ ಮುನ್ನ ಉಭಯ ದೇಶಗಳು ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ಸೌಹಾರ್ದತೆ ಬಲಪಡಿಸುವ ಮಾರ್ಗಗಳ ಕುರಿತು ಚರ್ಚಿಸಿದವು ಎಂದು ಬೀಜಿಂಗ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿ ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ನೀಡಿದೆ. ಉಭಯ ರಾಷ್ಟ್ರಗಳ ನಾಯಕರ ನಡುವಿನ ಒಮ್ಮತದ ಆಧಾರದ ಮೇಲೆ ಆರ್ಥಿಕ, ರಾಜಕೀಯ ಮತ್ತು ಬಹುಪಕ್ಷೀಯ ವೇದಿಕೆಗಳಲ್ಲಿ ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಸುಧಾರಿಸುವ ಕುರಿತು ಕೂಡ ಚರ್ಚಿಸಲಾಯಿತು.

<>><><*><><<>

ಹತ್ತು ದಿನಗಳ ಓಣಂ ಹಬ್ಬದ ಅಂತಿಮ ಹಂತವಾದ ಉತ್ರಾಡಂ ಅನ್ನು ಕೇರಳಂನಲ್ಲಿ ಇಂದು ಸಂಭ್ರಮದಿಂದ ಆಚರಿಸಲಾಗುತ್ತಿದೆ. ನಾಳೆ ಆಚರಿಸಲಾಗುವ ತಿರುವೋಣಂಗೆ ರಾಜ್ಯ ಸಜ್ಜಾಗುತ್ತಿದೆ. ಉತ್ರಾಡಂ ಕೇವಲ ತಿರುವೋಣಂನ ಮುನ್ನಾದಿನವಷ್ಟೇ ಅಲ್ಲದೆ, ಹಬ್ಬದ ಅಂತಿಮ ಸಿದ್ಧತೆಗಳನ್ನು ಪೂರ್ಣಗೊಳಿಸಿ, ಅಗತ್ಯ ವಸ್ತುಗಳ ಖರೀದಿ ನಡೆಸುವ ದಿನವೂ ಆಗಿದೆ. ಸಾಂಪ್ರದಾಯಿಕ ಉತ್ರಾಡ ಪಾಚಿಲ್ ಹಿನ್ನೆಲೆಯಲ್ಲಿ ರಾಜ್ಯದಾದ್ಯಂತ ಮಾರುಕಟ್ಟೆಗಳು ಮತ್ತು ಖರೀದಿ ಕೇಂದ್ರಗಳಲ್ಲಿ ಜನದಟ್ಟಣೆ ಹೆಚ್ಚಿದೆ.

ಮನೆಗಳನ್ನು ವರ್ಣರಂಜಿತ ಓಣಂ ಪುಷ್ಪಾಲಂಕಾರಗಳಿಂದ ಅಲಂಕರಿಸಲಾಗುತ್ತಿದ್ದು, ನಾಳೆ ಬಡಿಸಲಾಗುವ ಸಾಂಪ್ರದಾಯಿಕ ಓಣಂಗೆ ಸಿದ್ಧತೆಗಳು ನಡೆಯುತ್ತಿವೆ. ವಿವಿಧೆಡೆ ವಿಶೇಷ ಪೂಜೆಗಳನ್ನೂ ಆಯೋಜಿಸಲಾಗಿದೆ.

<>><><*><><<>

ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಅವರು ಇರಾನ್ ವಿರುದ್ಧ ಬೃಹತ್ ಮಟ್ಟದ ಆರ್ಥಿಕ ನಿರ್ಬಂಧಗಳನ್ನು ಘೋಷಿಸಿದ್ದು, ಇದನ್ನು ಎದುರಿಸಲು ತಮ್ಮ ಬಳಿ ೨ ವರ್ಷಗಳ ವಿಶೇಷ

ಯೋಜನೆ ಸಿದ್ಧವಾಗಿದೆ ಎಂದು ಇರಾನ್ ತಿಳಿಸಿದೆ. ಇರಾನ್‌ನೊಂದಿಗೆ ಅಮೆರಿಕವು ತನ್ನ ಎಲ್ಲಾ ಆರ್ಥಿಕ ಸಂಬಂಧಗಳನ್ನು ಕಡಿತಗೊಳಿಸಲಿದ್ದು, ಇರಾನ್‌ಗೆ ಹಣಕಾಸಿನ ನೆರವು ನೀಡುವ ಇತರ ದೇಶಗಳನ್ನೂ ಜಾಗತಿಕವಾಗಿ ಪ್ರತ್ಯೇಕಿಸುವುದಾಗಿ ಬೆಸೆಂಟ್ ಎಚ್ಚರಿಸಿದ್ದಾರೆ. ಈ ನೂತನ ನಿರ್ಬಂಧಗಳು ಇರಾನ್‌ನ ತೈಲ ಸಾರಿಗೆ, ವಿಮಾನಯಾನ, ತಂತ್ರಜ್ಞಾನ, ಚಿನ್ನ ಹಾಗೂ ಡಿಜಿಟಲ್ ಸ್ವತ್ತುಗಳು ಸೇರಿದಂತೆ ಪ್ರಮುಖ ೫ ವಲಯಗಳನ್ನು ಗುರಿಯಾಗಿಸಿಕೊಂಡಿವೆ. ಅಮೆರಿಕದ ಈ ಕ್ರಮಕ್ಕೆ ಪ್ರತಿಕ್ರಿಯಿಸಿರುವ ಇರಾನ್‌ನ ಆರ್ಥಿಕ ಸಚಿವ ಅಲಿ ಮದನಿಜಾದೆಹ್, ಇಂತಹ ನಿರ್ಬಂಧಗಳನ್ನು ಎದುರಿಸಲು ತಮ್ಮ ದೇಶ ಸಂಪೂರ್ಣವಾಗಿ ಸಜ್ಜಾಗಿದೆ ಎಂದು ಹೇಳಿದ್ದಾರೆ. ಇದರ ಬೆನ್ನಲ್ಲೇ, ಜಾಗತಿಕ ಇಂಧನ ಪೂರೈಕೆಯ ಪ್ರಮುಖ ಮಾರ್ಗವಾಗಿರುವ 'ಹಾರ್ಮುಜ್ ಜಲಸಂಧಿ' ಮೂಲಕ ಸರಕು ಸಾಗಣೆಗೆ ಇರಾನ್ ನಿರ್ಬಂಧ ಹೇರಿದ್ದು, ಪ್ರಾದೇಶಿಕ ತೈಲ ರಫ್ತನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸುವುದಾಗಿ ಎಚ್ಚರಿಸಿದೆ.

**<>><><*><><<>**

ಪರಾರಿಯಾಗಿದ್ದ ಬಾಂಬಿಹಾ ಗ್ಯಾಂಗ್‌ನೊಂದಿಗೆ ಸಂಬಂಧ ಹೊಂದಿರುವ ಮೂವರನ್ನು ಭಾರತೀಯ ತನಿಖಾ ಸಂಸ್ಥೆಗಳು ಮಲೇಷ್ಯಾದಲ್ಲಿ ಬಂಧಿಸಿ ಭಾರತಕ್ಕೆ ಕರೆತಂದಿವೆ. ಈ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ನೀಡಿರುವ ಗೃಹ ಸಚಿವರ ಕಚೇರಿ, ಜಸ್ಪ್ರೀತ್ ಸಿಂಗ್, ಅಜಯ್ ಸಿಂಗ್ ಮತ್ತು ಪವನ್‌ದೀಪ್ ಸಿಂಗ್ ಎಂಬ ಮೂವರನ್ನು ಭಾರತಕ್ಕೆ ಕರೆತಂದು ಪೊಲೀಸ್ ವಶಕ್ಕೆ ಒಪ್ಪಿಸಲಾಗಿದೆ ಎಂದು ತಿಳಿಸಿದೆ. ಆರೋಪಿಗಳು ಸುಲಿಗೆ, ಗಡಿಯಾಚೆಗಿನ ಶಸ್ತ್ರಾಸ್ತ್ರ ಮತ್ತು ಮಾದಕ ವಸ್ತು ಕಳ್ಳಸಾಗಣೆ ಸೇರಿದಂತೆ ಹಲವು ಅಪರಾಧಗಳಲ್ಲಿ ಭಾಗಿಯಾಗಿದ್ದಾರೆ ಎನ್ನಲಾಗಿದೆ. ಲುಧಿಯಾನದಲ್ಲಿ ನಡೆದಿದ್ದ ಗ್ರೆನೇಡ್ ದಾಳಿಯ ಸಂಚಿನೊಂದಿಗೂ ಇವರಿಗೆ ಸಂಬಂಧವಿದೆ ಎಂದು ಗೃಹ ಸಚಿವರ ಕಚೇರಿ ತಿಳಿಸಿದೆ.

**<>><><*><><<>**

ಗಂಗಾ ಸೇರಿದಂತೆ ಪ್ರಮುಖ ನದಿಗಳ ನೀರಿನ ಮಟ್ಟ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಪಾಟ್ನಾ ಸೇರಿದಂತೆ ಬಿಹಾರದ ಹಲವು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಮತ್ತಷ್ಟು ಹದಗೆಟ್ಟಿದೆ. ಭಾಗಲ್ಪುರ ಮತ್ತು ಬೇಗುಸರಾಯ್ ಜಿಲ್ಲೆಗಳಲ್ಲಿ ತಡೆಗೋಡೆಗಳು ಒಡೆದು ನೂರಾರು ಜನರು ಬಾಧಿತರಾಗಿದ್ದಾರೆ. ಜಲಸಂಪನ್ಮೂಲ ಇಲಾಖೆಯ ತಂಡಗಳು ತಡೆಗೋಡೆಗಳ ದುರಸ್ತಿ ಕಾರ್ಯದಲ್ಲಿ ತೊಡಗಿವೆ. ಮುಖ್ಯಮಂತ್ರಿ ಸಮ್ರಾಟ್ ಚೌಧರಿ, ಪ್ರವಾಹಪೀಡಿತ ಜಿಲ್ಲೆಗಳ ವೈಮಾನಿಕ ಸಮೀಕ್ಷೆ ನಡೆಸಿ, ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳನ್ನು ತ್ವರಿತವಾಗಿ

ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಗಂಗಾ ನದಿಯ ನೀರಿನ ಮಟ್ಟ ಏರಿಕೆಯಾಗುತ್ತಿರುವ ಹಿನ್ನೆಲೆಯಲ್ಲಿ ಪಶ್ಚಿಮ ಬಂಗಾಳ ಸರ್ಕಾರ ಫರಕ್ಕಾ ಬ್ಯಾರೇಜ್‌ನ ಎಲ್ಲಾ ಗೇಟ್‌ಗಳನ್ನು ತೆರೆದಿದೆ.

**<>><><*><><<>**

ದೆಹಲಿಯಲ್ಲಿ ಇಂದು ಭಾರಿ ಮಳೆಯಾಗಿದ್ದು, ಹಲವು ಪ್ರದೇಶಗಳು ಜಲಾವೃತಗೊಂಡು ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗಿದೆ.  ದೆಹಲಿಯ ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲೂ ಪ್ರತಿಕೂಲ ಹವಾಮಾನದಿಂದ ವಿಮಾನಗಳ ಸಂಚಾರಕ್ಕೆ ಅಡಚಣೆಯಾಗಿದೆ. ಕನಿಷ್ಠ ೧೮ ವಿಮಾನಗಳ ಸಂಚಾರ ರದ್ದಾಗಿದ್ದು, ೧೪೯ ವಿಮಾನಗಳು ವಿಳಂಬಗೊಂಡಿವೆ. ನಿನ್ನೆ ಕೂಡ ಭಾರಿ ಮಳೆಯಿಂದ ದೆಹಲಿ-ಎನ್‌ಸಿಆರ್ ವ್ಯಾಪ್ತಿಯಲ್ಲಿ ಸಂಚಾರ ಅಸ್ತವ್ಯಸ್ತಗೊಂಡಿತ್ತು. ಗುರುಗ್ರಾಮ್ ಮತ್ತು ನೋಯ್ಡಾದ ಹಲವು ಪ್ರದೇಶಗಳಲ್ಲೂ ಜಲಾವೃತ ಪರಿಸ್ಥಿತಿ ನಿರ್ಮಾಣವಾಗಿತ್ತು. ಮಳೆಯ ಹಿನ್ನೆಲೆಯಲ್ಲಿ ಗುರುಗ್ರಾಮ್‌ನಲ್ಲಿ ಇಂದು ಕಚೇರಿಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಮನೆಯಿಂದಲೇ ಕಾರ್ಯನಿರ್ವಹಣೆ ಹಾಗೂ ಆನ್‌ಲೈನ್ ತರಗತಿಗಳಿಗೆ ಸೂಚಿಸಲಾಗಿತ್ತು.

**<>><><*><><<>**

ಕೊಲಂಬೊದಲ್ಲಿ ನಡೆಯುತ್ತಿರುವ ಭಾರತ-ಶ್ರೀಲಂಕಾ ನಡುವಿನ ಟೆಸ್ಟ್ ಕ್ರಿಕೆಟ್ ಸರಣಿಯ ಎರಡನೇ ಹಾಗೂ ಅಂತಿಮ ಪಂದ್ಯದ ಮೂರನೇ ದಿನದಾಟದಲ್ಲಿಂದು ತನ್ನ ಮೊದಲನೇ ಇನ್ನಿಂಗ್ಸ್ ಅನ್ನು ಶ್ರೀಲಂಕಾ ಮುಂದುವರೆಸಿದೆ.  ಭೋಜನ ವಿರಾಮದ ವೇಳೆಗೆ ಶ್ರೀಲಂಕಾ ೪ ವಿಕೆಟ್ ನಷ್ಟಕ್ಕೆ ೧೩೦ ರನ್ ಗಳಿಸಿ, ೩೭೩ ರನ್‌ಗಳ ಹಿನ್ನಡೆಯಲ್ಲಿತ್ತು.  ಅಲ್ಪ ಮಳೆ ಹಾಗೂ ಕ್ರಿಡಾಂಗಣ ತೇವಾಂಶದಿಂದ ಕೂಡಿದ್ದರ ಪರಿಣಾಮ ದಿನದಾಟಕ್ಕೆ ಅಲ್ಪ ಅಡ್ಡಿಯಾಗಿದೆ.  ಎರಡನೇ ದಿನದಾಟದಲ್ಲಿ ನಿನ್ನೆ ಭಾರತ ತನ್ನ ಮೊದಲ ಇನ್ನಿಂಗ್ಸ್ ಅನ್ನು ೯ ವಿಕೆಟ್ ನಷ್ಟಕ್ಕೆ ೫೦೩ ರನ್‌ಗಳ ಬೃಹತ್ ಮೊತ್ತಕ್ಕೆ ಡಿಕ್ಲೇರ್ ಮಾಡಿಕೊಂಡಿತು. ಮಳೆಯಿಂದಾಗಿ ಪಂದ್ಯಕ್ಕೆ ಅಡಚಣೆ ಉಂಟಾಗಿದ್ದರೂ, ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶಿಸಿದ ಧ್ರುವ ಜುರೆಲ್ ಅಜೇಯ ೧೧೫ ರನ್ ಗಳಿಸಿದರೆ, ಅವರಿಗೆ ಕನ್ನಡಿಗ ದೇವದತ್ ಪಡಿಕ್ಕಲ್ ೧೧೭ ರನ್ ಗಳಿಸಿ ಸಾಥ್ ನೀಡಿದರು.

**<>><>< ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು ><><<>**

**<>><>< ನಮ್ಮ ಮುಂದಿನ ವಾರ್ತಾ ಪ್ರಸಾರ ಮಧ್ಯಾಹ್ನ ೨.೩೦ ಕ್ಕೆ ><><<>**